# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್‌ಸಮಿತಿ ಸಭೆ, ದಿನಾಂಕ: 21.11.2020 ರ
## ಸಭಾ ನಡುವಳಿ

ದಿನಾಂಕ: 21.11.2020 ರಂದು ಬೆಳಿಗ್ಗೆ 11.00 ಗಂಟೆಗೆ ವಾರ್ಡ್ ನಂ.06 ಥಣಿಸಂದ್ರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಹೆಗಡೆನಗರ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ ಇಲ್ಲಿ ಬಿಬಿಎಂಪಿ ಸಮುದಾಯ ಭವನ ಕಟ್ಟಡದಲ್ಲಿ ನೆಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ.ಎಸ್ ಶ್ರೀಧರ್ | ನೋಡಲ್ ಅಧಿಕಾರಿ, ವಾರ್ಡ್ ನಂ. 06(ಥಣಿಸಂದ್ರ) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ಉಪ ವಿಭಾಗ |
| 2 | ಶ್ರೀ ಸುರೇಶ್ ದೇವತ್‌ರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮಿತಿ, ವಾರ್ಡ್ ನಂ. 06 (ಥಣಿಸಂದ್ರ) |
| 3 | ಶ್ರೀಮತಿ ಡಾ॥ ಕೇಶವಪಾಣಿ | ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಹೆಗಡೆನಗರ |
| 4 | ಶ್ರೀ ಕಿರಣ್.ಬಿ | ಸಹಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಯಲಹಂಕ ವಲಯ, ಬಿಬಿಎಂಪಿ |
| 5 | ಶ್ರೀ ಕೆ.ಎನ್ ಬಾಬುರೆಡ್ಡಿ | ಕಿರಿಯ ಅಭಿಯಂತರರು, ವಿದ್ಯುತ್ ವಿಭಾಗ ಬಿಬಿಎಂಪಿ |
| 6 | ಶ್ರೀ ಗಂಗಾಧರಯ್ಯ | ಕಿರಿಯ ಅಭಿಯಂತರರು ಬೆಸ್ಕಾಂ |
| 7 | ಶ್ರೀ ವಿ. ಪ್ರೇಮ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 06 |
| 8 | ಶ್ರೀ ಜಿತೇಂದ್ರ ರಾವ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 06 |
| 9 | ಶ್ರೀ ಮಂಜುನಾಥ್. ಎಸ್ | ಕಿರಿಯ ಆರೋಗ್ಯ ಪರಿವೀಕ್ಷಕರು, |
| 10 | ಶ್ರೀ ವೆಂಕಟೇಶ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 06 |
| 11 | ಶ್ರೀ ಮೂರ್ತಿ ಕೆ.ಎ | ಕಂದಾಯ ಪರಿವೀಕ್ಷಕರು ವಾರ್ಡ್ ನಂ. 06 |

ಶ್ರೀ ಸುರೇಶ್ ದೇವತ್‌ರಾಜ್, ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ವಾರ್ಡ್ ಅಭಿಯಂತರರು ವಾರ್ಡ್ ನಂ. 06 ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು, ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

1. **ಕೋವಿಡ್-19ರ ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಜಾಗ್ರತ ಕ್ರಮಗಳ ಬಗ್ಗೆ.** ಡಾ॥ ಕೇಶವಪಾಣಿ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಕೊರೊನಾ ಸೋಂಕು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದು, ಪ್ರತಿ ದಿನ 300 ರಿಂದ 400 ಕೋವಿಡ್ ಟೆಸ್ಟ್ ಮಾಡಲಾಗುತ್ತಿದ್ದು, ಬಡಾವಣೆ ನಿವಾಸಿಗಳ ಸಂಘದವರು ತಮ್ಮ ತಮ್ಮ ಬಡಾವಣೆಗಳಲ್ಲಿ ಸಾರ್ವಜನಿಕರಿಗೆ ಕೋವಿಡ್-19ರ ಪರೀಕ್ಷೆ ಮಾಡಲು ಸಹಕಾರ ಕೋರಿದರು..
2. ದಾಸಪ್ಪ, ಸಂಯುಕ್ತ ಗೆಳೆಯರ ಬಳಗ ಹೆಗಡೆನಗರ: ರವರು ಮಾತನಾಡಿ

Scanned with CamScanner

1. ವಾರ್ಡ್ ನಂ. 06ರ ವ್ಯಾಪ್ತಿಯಲ್ಲಿ ಹೊರರಾಜ್ಯಗಳಿಂದ ವಲಸೆ ಕಾರ್ಮಿಕರು ಪ್ರತಿ ದಿನ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದು, ಸದರಿಯವರಿಗೆ ಕೋವಿಡ್ ಪರಿಕ್ಷೇ ಮಾಡಿಸುವುದು ಅವಶ್ಯಕವಾಗಿರುತ್ತದೆಂದು ತಿಳಿಸಿದರು.
2. ಹೆಗಡೆನಗರ ಪಶ್ಚಿಮ ಭಾಗದಲ್ಲಿ ಕಸ ವಿಲೇವಾರಿ ಸರ್ಮಕವಾಗಿ ನಡೆಸುತ್ತಿಲ್ಲವೆಂದು ತಿಳಿಸಿದರು ಈ ಬಗ್ಗೆ ನೊಡೆಲ್ ಅಧಿಕಾರಿಯವರು ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸದರಿ ವಿಷಯದ ಬಗ್ಗೆ ಪರಿಶೀಲಿಸಿ ಕೂಡಲೇ ಕ್ರಮ ವಹಿಸಲು ಸೂಚಿಸಿದರು.
3. ಹೆಗಡೆನಗರ ವೃತ್ತದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡುವಂತೆ ಕೋರಿದರು ಇದಕ್ಕೆ ವಾರ್ಡ್ ಅಭಿಯಂತರರು ಮಾತನಾಡಿ ಹೆಗಡೆನಗರ ವೃತ್ತದಲ್ಲಿ ಜಾಗದ ಕೊರತೆ ಇರುವುದರಿಂದ ಸಾಧ್ಯವಾಗಿರುವುದಿಲ್ಲವೆಂಧು ತಿಳಿಸಿದರು ಈ ಬಗ್ಗೆ ನಾರಾಯಣಪುರ ಕ್ರಾಸ್ ಮೇಲು ಸೇತುವೆ ಕೆಳಗೆ ನಿರ್ಮಾಣ ಮಾಡುವಂತೆ ಕೋರಿದರು ಇದಕ್ಕೆ ನೊಡೆಲ್ ಅಧಿಕಾರಿಯವರು ಈ ಬಗ್ಗೆ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗಕ್ಕೆ ಪತ್ರಬರೆದು ಮೇಲು ಸೇತುವೆ ಕೆಳಗೆ ಶೌಚಾಲಯದ ನಿರ್ಮಾಣ ಮಾಡಲು ಅನುಮತಿ ಪಡೆಯಲು ಅಗತ್ಯ ಕ್ರಮ ವಹಿಸುವಂತೆ ಸೂಚಿಸಿದರು.
4. ಹೆಗಡೆನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಮುಖ್ಯರಸ್ತೆಯಲ್ಲಿ ನೀರಿನ ಕೊಳವೆ ಸಾಲುಗಳನ್ನು ಅಳವಡಿಸಿ ಕುಡಿಯುವ ನೀರಿನ ಸರಬರಾಜು ಮಾಡಲು ಕೋರಿದರು.
5. ಹೆಗಡೆನಗರದಲ್ಲಿ ಯಾವುದೇ ಮಾರುಕಟ್ಟೆ ಇಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು. ಮಾರುಕಟ್ಟೆಗಾಗಿ ಸೂಕ್ತ ವ್ಯವಸ್ಥೆ ಮಾಡಲು ಕ್ರಮ ವಹಿಸುವಂಥೆ ಕೋರಿದರು.

3. **ಶಿವಣ್ಣ, ಹೆಗಡೆಗರ ನಿವಾಸಿ :** ರವರು ಮಾತನಾಡಿ
   1. ಹೆಗಡೆನಗರ ಪೂರ್ವ ಭಾಗದಲ್ಲಿ ಕಸ ವಿಲೇವಾರಿ ಸರ್ಮಕವಾಗಿ ನಡೆಸುತ್ತಿದ್ದು ಪಶ್ಚಿಮ ಭಾಗದಲ್ಲಿ ಸರಿಯಾಗಿ ಕಸ ವಿಲೇವಾರಿ ಕಾರ್ಯವನ್ನು ನಡೆಸುತ್ತಿಲ್ಲವೆಂದು ತಿಳಿಸಿದರು ಈ ಬಗ್ಗೆ ನೊಡೆಲ್ ಅಧಿಕಾರಿಯವರು ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸದರಿ ವಿಷಯದ ಬಗ್ಗೆ ಪರಿಶೀಲಿಸಿ ಕೂಡಲೇ ಕ್ರಮ ವಹಿಸಲು ಸೂಚಿಸಿದರು.
   2. ಹೆಗಡೆನಗರ ಪೂರ್ವ ಭಾಗದಲ್ಲಿ ಬಾಕಿ ಇರುವ ಒಳಚರಂಡಿ ಕೊಳವೆಸಾಲು ಅಳವಡಿಸುವ ಕಾಮಗಾರಿಯನ್ನು ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆಯ ವತಿಯಿಂದ ತುರ್ತಾಗಿ ಪೂರ್ಣಗೊಳಿಸುವಂತೆ ಕ್ರಮ ವಹಿಸಲು ಕೋರಿದರು.
   3. ಹಗಡೆನಗರ ಪೂರ್ವ ಭಾಗದಲ್ಲಿ ಚರಂಡಿಗಳಲ್ಲಿ ಮರಗಳು ಬೆಳೆದಿರುವುದರಿಂದ ಮಳೆ ನೀರು ಹರಿಯಲು ಅಡಚಣೆ ಉಂಟಾಗಿರುತ್ತದೆ ಆದುದರಿಂದ ಮರಗಳನ್ನು ಕತ್ತರಿಸಲು ಸಂಬಂಧಪಟ್ಟ ಅರಣ್ಯ ಅಧಿಕಾರಿಗಳಿಗೆ ಕ್ರಮ ವಹಿಸಲು ಕೋರಿದರು.
4. **ಶ್ರೀ ಮರಿಮಾದಯ್ಯ ಹೆಗಡೆನಗರ ನಿವಾಸಿ :** ರವರು ಮಾತನಾಡಿ
   1. ಹೆಗಡೆನಗರ ಪಶ್ಚಿಮ ಭಾಗದಲ್ಲಿ ಪಾದಚಾರಿ ಮಾರ್ಗದ ಮೇಲೆ ತಳ್ಳುಗಾಡಿಗಳನ್ನು ನಿಲ್ಲಿಸಿಕೊಂಡು ವ್ಯಾಪಾರ ಮಾಡುತ್ತಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತುಂಬ ತೊಂದರೆಯಾಗುತ್ತಿರುತ್ತದ ಆದುದರಿಂದ ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸುವ ಕಾರ್ಯಾಚರಣೆಯನ್ನು ಕೈಗೊಂಡು ಸಾರ್ವಜನಿಕರಿಗೆ ಓಡಾಡಲು ಅನುಕೂಲ ಮಾಡಿಕೊಡಲು ಕೋರಿದರು.
   2. ಇಬ್ರಾಹಿಮ್, ಹೆಗಡೆನಗರ ರವರು ಮಾತನಾಡಿ ಹೆಗಡೆನಗರದಲ್ಲಿ ಹಾಲಿ ವಾಟರ್‌ಮ್ಯಾನ್ ಆಗಿ ಕಾರ್ಯನಿರ್ವಹಿಸುತ್ತಿರುವ ಗಂಗಣ್ಣ ರವರು ಸಮರ್ಪಕವಾಗಿ ನೀರು ಬಿಡುತ್ತಿರುವುದಿಲ್ಲ ಆದುದರಿಂದ ಪರೀಶೀಲಿಸಿ ಕ್ರಮ ವಹಿಸುವಂಥೆ ಕೋರಿದರು.
5. **ಶ್ರೀ ಶ್ರೀನಿವಾಸ್‌ರಾವ್ ಅಮರಜ್ಯೋತಿನಗರ :** ರವರು ಮಾತನಾಡಿ ಅಮರಜ್ಯೋತಿ ಬಡಾವಣೆಯಲ್ಲಿ ಮನೆ ಮನೆಗೆ ಒಳಚರಂಡಿ ಸಂಪರ್ಕವನ್ನು ನೀಡಬೇಕಾಗಿ ಕೋರಿದರು ಹಾಗೂ ಎಸ್ಟಿಮ್ ಮಾಹಲ್ ಹತ್ತಿರ ಬಾಕಿ ಇರುವ ಒಳಚರಂಡಿ ಸಂಪರ್ಕ ಕಾಮಗಾರಿಯನ್ನು ಕೂಡಲೇ ಕೈಗೊಳ್ಳಲು ಕ್ರಮ ವಹಿಸಲು ಕೋರಿದರು. ಹಾಗೂ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್‌ನ ಎಲ್ಲಾ ಸಾರ್ವಜನಿಕರಿಗೆ ಅನುಕೂಲವಾಗುವಂತೆ



Scanned with CamScanner

ಮುಂದಿನ ಸಭೆಗಳನ್ನು ಥಣಿಸಂದ್ರ/ ದಾಸರಹಳ್ಳಿ, ಬೇರೆ ಬೇರೆ ಜಾಗಗಳಲ್ಲಿ ನಡೆಸಲು ಕ್ರಮ ಕೈಗೊಳ್ಳಲು ಕೋರಿದರು.

6. **ಶ್ರೀ ವಿನೋದ್, ಶಬರಿನಗರ** ರವರು ಮಾತನಾಡಿ
   1. ಶಬರಿನಗರದಲ್ಲಿ ರಸ್ತೆ ಪಕ್ಕ ಗಿಡ/ಗಂಟಿಗಳು ಬೆಳೆದಿದ್ದು, ಇದನ್ನು ತೆಗೆದು ಸ್ವಚ್ಛಗೊಳಿಸುವಂತೆ ಕ್ರಮ ವಹಿಸಲು ಕೋರಿದರು.
   2. ಶಬರಿನಗರದಲ್ಲಿ ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳುವಂತೆ ಕೋರಿದರು ಬಗ್ಗೆ ನೋಡೆಲ್ ಅಧಿಕಾರಿಗಳೂ ಕೂಡಲೇ ಕ್ರಮ ವಹಿಸುವಂತೆ ಬಿ.ಡಬ್ಲೂಎಸ್.ಎಸ್.ಬಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಕೊನೆಯದಾಗಿ ಮಾನ್ಯ ನೋಡೆಲ್ ಅಧಿಕಾರಿಗಳು, ವಾರ್ಡ್ ಸಮಿತಿ ರವರು ಮಾತನಾಡಿ ಈವರೆವಿಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಎಲ್ಲಾ ದೂರು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಕಾರ್ಯೋನ್ಮುಖರಾಗುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಇಲಾಖಾ ಅಧಿಕಾರಿಗಳಿಗೆ ಸೂಚಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

24.11.2020

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್‌ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)

ನೋಡೆಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 06, (ಥಣಿಸಂದ್ರ)

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.

Scanned with CamScanner